ಸರಿಯಲ್ಲ ಅದನ್ನು ರದ್ದತಿ ಮಾಡಕೂಡದೆಂದು ಹೇಳಿ, ಅದರ ಪೂರ್ಣ ಪ್ರಮಾಣದ ಕಟ್ಟಡದ ಕಾರ್ಯಕ್ರಮ ನಡೆಯುತ್ತಿದೆ. ನಿನ್ನೆ ಮಾನ್ಯ ಸಚಿವರು ಉತ್ತರ ಕೊಡುವ ಸಂದರ್ಭದಲ್ಲಿ ಸರ್ಕಾರಿ ಕಾಲೇಜಿನ ಕಟ್ಟಡದ ಕಾಮಗಾರಿ ಕೆಲಸ ಪ್ರಗತಿಯಲ್ಲಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ದಯಮಾಡಿ ರದ್ದತಿಯನ್ನು ಮಾಡಬಾರದೆಂದು ತಮ್ಮ ಮುಖಾಂತರ ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಯ್ದೀನ್ (ಉನ್ನತ ಶಿಕ್ಷಣ ಸಚಿವರು) :— 53:9 ಕರ್ನಾಟಕ ಸ್ಟೇಟ್ ಯುನಿವರ್ಸಿಟಿ 15:76 ಆಕ್ಟ್ ಪ್ರಕಾರ ಈ ಅಫಿಲಿಯೇಷನ್ ತಡೆಹಿಡಿಯತಕ್ಕಂಥ ಅಧಿಕಾರ ಈ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಇದೆ. ಅಲ್ಲಿ ನಿರ್ಣಯ ಮಾಡಿರುವ ಅಕಾಡೆಮಿಕ್ ಕೌನ್ಸಿಲ್ ಏನು ಇದೆ ಅವರು ಅದನ್ನು ತಡೆಹಿಡಿಯಬಹುದು. ಒಂದು ವೇಳೆ ಸಿಂಡಿಕೇಟ್ ಇದನ್ನು ತಡೆಹಿಡಿಯಲು ವಿಫಲವಾದರೆ ಸರ್ಕಾರ ಆ ಹಂತದಲ್ಲಿ ಮಧ್ಯಸ್ಥಿಕೆಯನ್ನು ವಹಿಸುತ್ತದೆ. ಸರ್ಕಾರ ತನಿಖೆಗೆ ಇರತಕ್ಕಂಥ ಅಧಿಕಾರದ ಮೂಲಕವಾಗಿ ಅಫಿಲಿಯೇಷನನ್ನು ಮುಂದುವರೆಸುವ ಭರವಸೆಯನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕವಾಗಿ ಕೊಡುತ್ತೇನೆ. ಇದರ ಜೊತೆಗೆ ಉಳಿದ ವಿಚಾರಗಳಿಗೆ ನಾನು ನಿನ್ನೆ ಉತ್ತರವನ್ನು ಕೊಟ್ಟಿದ್ದೇನೆ. ಖಂಡಿತವಾಗಿ ಅದಕ್ಕೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಆಧ್ಯತೆ ಕೊಡಲಾಗುತ್ತದೆ.

(ಗ) ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಗೆ ಚಿಪ್ಪನ್ನು ತೆಗೆಯುವ ಗುತ್ತಿಗೆಯನ್ನು ಮುಂದುವರಿಸಿದ ಬಗ್ಗೆ

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) :— ಮಾನ್ಯ ಅಧ್ಯಕ್ಷರೆ, ಗಣಿ ಮತ್ತು ಭೂ ವಿಜ್ಞಾನ ಹಾಗೂ ಸಣ್ಣ ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟಂಥ ಪ್ರಶ್ನೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯ ಗುತ್ತಿಗೆ ಪಡೆದು ಕದಾವಳಿ ಜಿಲ್ಲೆಯಲ್ಲಿರುವ ಸಹಕಾರ ಸಂಘಗಳ ಮುಖಾಂತರ ಆ ಚಿಪ್ಪನ್ನು ತೆಗೆಯತಕ್ಕಂಥ ಒಂದು ಕೆಲಸವನ್ನು ಮಾಡಿಕೊಂಡು ಬರತಕ್ಕಂಥದ್ದು ತಮಗೆ ಗೊತ್ತಿದೆ. ಅದರ ಗುತ್ತಿಗೆಯ ಅವಧಿಯು ದಿನಾಂಕ: 27-3-1999ಕ್ಕೆ ಮುಗಿಯುತ್ತದೆ. ಈ ಚಿಪ್ಪನ್ನು ತೆಗೆಯುವ ಕೆಲಸವನ್ನು ಸಾವಿರಾರು ಜನ ಕಾರ್ಮಿಕರು ಈ ಒಂದು ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಈ ಗುತ್ತಿಗೆಯನ್ನು ನಮ್ಮ ಖಾದಿ ಮತ್ತು ಗ್ರಾಮೋದ್ಯೋಗ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಗುತ್ತಿಗೆ ಸಮಯ ಮೀರಿದರೆ, ಅಷ್ಟು ಜನ ಕಾರ್ಮಿಕರು ನಿರಾಶ್ರಿತರಾಗುತ್ತಾರೆ, ಇದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಿ, ಇದರಲ್ಲಿ ವಿಶೇಷವಾಗಿ ಕಾರ್ಮಿಕ ಇಲಾಖೆಯ ಅಗ್ರಿಮೆಂಟ್ ಕೂಡ ಇದೆ. ಯಾವುದೇ ರೀತಿಯಲ್ಲಿ ಕಾರ್ಮಿಕರಿಗೆ ತೊಂದರೆಯಾಗದಂತೆ ಇದನ್ನು ಪುನಃ ರಿನಿವಲ್ ಮಾಡಿಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸಿಡುತ್ತೇನೆ.

ಶ್ರೀ ಎ.ಬಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :— ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯವರು ಈಗಾಗಲೇ ಆ ಕಪ್ಪೆಚಿಪ್ಪನ್ನು ತೆಗೆಯಲು ಕಂಟ್ರಾಕ್ಟ್ ತೆಗೆದುಕೊಂಡಿದ್ದಾರೆ. ಅದು ದಿನಾಂಕ: 27-3-1999 ರಂದು ಮುಕ್ತಾಯವಾಗುತ್ತದೆ. ಮುಂದೆ ಕೂಡ ನಾನು ಅವರಿಗೆ ನವೀಕರಣ ಕೊಡುವುದಾಗಿ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯವರು ಅಗ್ರಿಮೆಂಟ್ ಮಾಡಿಕೊಂಡರೆ ಮಾತ್ರ ಅವರಿಗೆ ಪುನಃ ಸಹಕಾರ ಸಂಘಗಳಿಗೆ ಕೊಡುವುದಕ್ಕೆ ಆಗುತ್ತದೆ. ನೀವು ರಿನಿವಲ್ ಮಾಡಿ ಕೊಡುವುದು 4 ದಿವಸ ತಡವಾದರೆ ಅವರಿಗೆ 4 ದಿವಸ ಕೆಲಸ ನಿಲ್ಲುತ್ತದೆ.

ಶ್ರೀ ಎ.ಬಿ. ಪಾಟೀಲ್ :— ತಕ್ಷಣ ಅವರಿಗೆ ರಿನೀವಲ್ ಮಾಡಿಕೊಡುತ್ತೇನೆ.

(ಜ) ಸಜಪ-ಹುನ್ನೂರು ಏತನೀರಾವರಿಯಲ್ಲಿ ಜನ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) :— ಮಾನ್ಯ ಅಧ್ಯಕ್ಷರೆ, ಸಜಪ-ಹುನ್ನೂರು ಏತ ನೀರಾವರಿ ಯೋಜನೆ ಸುಮಾರು 30 ವರ್ಷಗಳಿಂದ ಪ್ರಾರಂಭವಾಗಿದೆ. ಅದು ಪ್ರಾರಂಭವಾದಾಗ 300 ಎಕರೆ ಜಮೀನಿಗೆ ನೀರು ಕೊಡುವ ಒಂದು ಯೋಜನೆ ಪ್ರಾರಂಭ ಆಗಿತ್ತು. ಅದು ದುರಸ್ತಿಯಾಗದೆ ಸರಿಯಾದ ರೀತಿಯಲ್ಲಿ ಕಾರ್ಯಾಚರಣೆ ಮಾಡದೇ ಇರುವುದರಿಂದ, ಸುಮಾರು 25 ಎಕರೆ ಜಮೀನಿಗೆ ಮಾತ್ರ ನೀರನ್ನು ಕೊಡುತ್ತದೆ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. 300 ಎಕರೆ ಜಮೀನಿಗೆ ನೀರು ಕೊಡುವ ಒಂದು ವ್ಯವಸ್ಥೆ ಆಗಬೇಕು, ಮತ್ತು ಅದು ದುರಸ್ತಿಯಾಗದೆ ಇರುವುದರಿಂದ ಅದನ್ನು ದುರಸ್ಥಿಪಡಿಸಿ, ಅದಕ್ಕೆ ಬೇಕಾಗುವ 2 ಕೋಟಿ ರೂಪಾಯಿಗಳನ್ನು ಇದೇ ಬಜೆಟ್‌ನಲ್ಲಿ ಸರ್ಕಾರ ಒದಗಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು) :— ಈ ಕಾಮಗಾರಿ ಪ್ರಾರಂಭವಾಗಿರುವುದು ನಿಜ, ಅಷ್ಟೊಂದು ಎಕರೆ ಜಮೀನಿಗೆ ನೀರು ಹರಿಯುತ್ತಿರುವುದು ನಿಜ, ಆದರೆ ನನಗೆ ಇನ್ನೂ ಉತ್ತರ ಬಂದಿಲ್ಲ. ನನಗೆ ಉತ್ತರ ಬಂದ ನಂತರ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ. ನಾನು ಇದನ್ನು ಪರಿಶೀಲನೆ ಮಾಡಿ ಆದಷ್ಟು ಬೇಗನೆ ನೋಡುವ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು :— ಒಂದು ನಿಮಿಷ, ಮಾನ್ಯ ಮೀರಾಜುದ್ದೀನ್ ಪಟೇಲ್‌ರು ಎಲ್ಲಿ ಹೋದರು. ಮಾನ್ಯ ಮೀರಾಜುದ್ದೀನ್ ಪಟೇಲರನ್ನು ಕರೆಸಿ, ಈಗ ಅವರಿಗೆ ನಿಮ್ಮ ನೋಟೀಸನ್ನು ಕೊಟ್ಟು ಕಳುಹಿಸಿರುತ್ತೇನೆ. ಪುಟ್ಟಣ್ಣಯ್ಯನವರೇ, ತಾವು ಪ್ರಾರಂಭ ಮಾಡಬೇಕು. ಅದನ್ನು ನಾನು ಈಗಲೇ ತೆಗೆದುಕೊಳ್ಳುತ್ತೇನೆ.